ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

ಸಿಸಿ ನಂ.654/2019 ,
ಚಾಸಾ- 6, ಫ್ರಾಸಾ -5

| | |
|---|---|
| ಹೆಸರು | ಗಂಗಾಧರ |
| ತಂದೆಯ ಹೆಸರು | ಸುಂದರ ಗೌಡ |
| ವಯಸ್ಸು | 54 ವರ್ಷ |
| ಕೆಲಸ | ಖಾಸಗಿ ಕೆಲಸ |
| ವಾಸ | ಮಾಸ್ತಿಕಟ್ಟೆ |
| ಪ್ರಮಾಣೀಕರಿಸಿದ ದಿನಾಂಕ | 21-01-2025 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಚಾಸಾ-1 ಮತ್ತು ಚಾಸಾ-2 ರವರು ಗೊತ್ತು . ಆರೋಪಿ ಗೊತ್ತು . ಮೃತ ಮಹಾಬಲ ಶೆಟ್ಟಿ ಗೊತ್ತು. ದಿಃ 07-01-2019 ರಂದು ಸುಮಾರು ಸಂಜೆ 7-00 ಗಂಟೆ ಹೊತ್ತಿಗೆ ನಾನು ಮನೆಯ ಹತ್ತಿರ ಇರುವಾಗ , ಮಾಸ್ತಿ ಕಟ್ಟೆಯ ಸರ್ಕಾರಿ ಶಾಲೆಯ ಎದುರುಗಡೆ , ಶಬ್ದ ಬಂದಿದ್ದು, ಅಪಘಾತವಾಗಿರುತ್ತದೆ . ನಾನು ಹೋಗಿ ನೋಡಲಾಗಿ , ಮಹಾಬಲ ಶೆಟ್ಟಿ ಎನ್ನುವವರು ನಡೆದುಕೊಂಡು ಬರುತ್ತಿದ್ದ ಸಂದರ್ಭದಲ್ಲಿ ಸ್ಕೂಟರೊಂದು ಡಿಕ್ಕಿ ಪಡಿಸಿರುತ್ತದೆ . ಮಹಾಬಲ ಶೆಟ್ಟಿಯವರು ರಸ್ತೆಯಲ್ಲಿ ಬಿದ್ದಿದ್ದರು , ನಾನು ಹಾಗೂ ಅಲ್ಲಿ ಸೇರಿದ್ದ ಇತರರು 108 ಗಾಡಿಯಲ್ಲಿ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಮಹಾಬಲ ಶೆಟ್ಟಿಯವರು ಎ.ಜೆ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ .

ಮೋಟಾರ್ ಸೈಕಲ್ ಸವಾರನು ಜೊಸ್ವಿನ್ ಡಿಸೋಜಾ , ಆತನೂ ಕೂಡ ನನ್ನ ಪರಿಚಯಸ್ಥನಾಗಿರುತ್ತಾರೆ. ಮಹಾಬಲ ಶೆಟ್ಟಿಯವರು ಎ.ಜೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ 9ನೇ ತಾರೀಖಿಂದು ಮೃತಪಟ್ಟಿರುತ್ತಾರೆ . ಆ ಸಮಯದಲ್ಲೂ ನಾನು ಹೋಗಿರುತ್ತೇನೆ . ಶವ ಪಂಚನಾಮೆ ಸಮಯದಲ್ಲಿಯೂ ಕೂಡ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಈ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ . ಹೇಳಿಕೆಗೆ ಸಹಿ ಮಾಡಿರುವುದಿಲ್ಲ . ಶವ ಪಂಚನಾಮೆಗೆ ನಾನು ನನ್ನ ಸಹಿಯನ್ನು ಹಾಕಿರುತ್ತೇನೆ . ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ .

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ

ಆರೋಪಿಯ ಅತೀವೇಗ ಮತ್ತು ಅಜಾಗರೂಕತೆಯಿಂದಲೇ ಮಹಾಬಲ ಶೆಟ್ಟಿಯವರು ಮೃತಪಟ್ಟಿರುತ್ತಾರೆ ಎಂದರೆ ಇರಬಹುದು . ಅಪಘಾತವು ಸಂಜೆ 7-30 ಗಂಟೆ ಸಮಯದಲ್ಲಿ ಆಗಿರುತ್ತದೆ ಎಂದರೆ ಸರಿ .

ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಸ್.ಡಿ ರವರಿಂದಃ

ನಾನು ನನ್ನ ಮನೆಯ ಅಂಗಳದಲ್ಲಿ ಇದ್ದಾಗ , ಒಂದು ಶಬ್ದ ಕೇಳಿ ಬಂದಿದ್ದು , ಅದು ಏನೆಂದು ನಾನು ನೋಡಲು ರಸ್ತೆಗೆ ಹೋದಾಗ , ಅಲ್ಲಿ ಅಪಘಾತವಾಗಿರುತ್ತದೆ . ನಾನು ಸ್ಥಳಕ್ಕೆ ಹೋದ ಸಮಯದಲ್ಲಿ ಮಹಾಬಲ ಶೆಟ್ಟಿಯವರು ಸ್ಥಳದಲ್ಲಿ ಬಿದ್ದಿದ್ದರು , ಬೈಕು ಸ್ವಲ್ಪ ದೂರದಲ್ಲಿ ಬಿದ್ದಿತ್ತು . ಬೈಕು ಸಂಪೂರ್ಣವಾಗಿ ಜಖಂ ಆಗಿತ್ತು .

ಬಿದ್ದಿದ್ದ ಮೋಟಾರು ಬೈಕಿನ ಕಲರ್ ನನಗೆ ಗೊತ್ತಿಲ್ಲ . ನಿಪಿ-2 ರಲ್ಲಿ ಕಂಡು ಬರುವ ಮೋಟಾರು ವಾಹನವು ಯಾವುದೇ ಜಖಂ ಗೊಂಡಿಲ್ಲ ಎಂದರೆ ಸರಿ . ಅಪಘಾತವಾದ ದಿನವೇ ಪೊಲೀಸರು ಮೂಡಬಿದ್ರೆ ಸರ್ಕಾರಿ ಆಸ್ಪತ್ರೆಗೆ ಬಂದಿರುತ್ತಾರೆ . ಅಲ್ಲಿಗೆ ಬಂದಂತಹ ಪೋಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ . ನಾನು ಈ ಮೇಲೆ ಹೆಳಿದ ವಿಷಯವನ್ನೇಲಾ ಪೊಲೀಸರಿಗೆ ಹೇಳಿರುತ್ತೇನೆ . ನಾನು ಹೇಳಿದ ವಿಚಾರವನ್ನು ಪೊ ಒಲೀಸರು ಕೈಯಲಿಲ ಬೆರದುಕೊಂಡು ಹೋಗಿರುತ್ತಾರೆ . ಆ ಸಂದರ್ಭದಲ್ಲಿ ನಾನು ಮೊದಲಬಾರಿ ಹೇಳಿಕೆಯನ್ನು ನೀಡಿರುತ್ತೇನೇ , ತದನಂತರ ಶವ ಮಹಜರ್ ಸಮಯದಲ್ಲಿ ಇನ್ನೊಂದು ಬಾರಿ ಹೇಳಿಕೆಯನ್ನು ನೀಡಿರುತ್ತೇನೆ . ಎರಡನೇ ಬಾರಿಗೆ ನಾನು ನೀಡಿದ ಹೇಳಿಕೆಯನ್ನು ಪೊಲೀಸರು ಅವರ ಕೈ ಬರಹದಲ್ಲಿ ಬರೆದುಕೊಂಡು ಹೋಗಿರುತ್ತಾರೆ . ನಾನು ನನ್ನ ಮನೆಯ ಅಂಗಳದಲ್ಲಿ ಇದ್ದದ್ದು ಇಲ್ಲ ಎಂದರೆ ಸರಿಯಲ್ಲ . ಮೃತ ಮಹಾಬಲ ಶೆಟ್ಟಿಯವರು ನನಗೆ ಬಹಳ ಆತ್ಮೀಯರು ಎಂದರೆ ಸರಿ . ಅವರ ಕುಟುಂಬದವರಿಗೆ ಪರಿಹಾರ ಸಿಗಲೆಂದು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ..

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ